ಪರಿಣಾಮ ಮೂರು ನಾಲ್ಕು ತಿಂಗಳ ನಂತರ ಅದೇ ಮಗು ಬರೆದ ಚಿತ್ರದಲ್ಲಿ ವ್ಯಕ್ತವಾಗಿತ್ತು. ಆ ಚಿತ್ರದ ಶೀರ್ಷಿಕೆಯ ಹೆಸರು 'ನಾನು ಹೆಚ್ಚು ಪ್ರೀತಿಸುವ ವ್ಯಕ್ತಿ' ಎಂದು. ಇದರಲ್ಲಿ ಆ ಮಗು ತನ್ನ ತಂದೆಯ ಚಿತ್ರವನ್ನು ಬರೆದಿತ್ತು!

ನಾವು ನಮ್ಮ ಸಂಪಾದನೆ, ವೃತ್ತಿ, ಕೀರ್ತಿ – ಇವುಗಳಿಗೆ ಅಗತ್ಯಕ್ಕಿಂತಲೂ ಹೆಚ್ಚು ಮಹತ್ವ ಕೊಡುತ್ತೇವೆ. ಆವಶ್ಯಕತೆ ಇರುವುದಕ್ಕಿಂತ ಹೆಚ್ಚು ಸಂಪಾದಿಸುತ್ತೇವೆ. ಆದರೆ ಯಾರಿಗಾಗಿ ಸಂಪಾದನೆ ಮಾಡುತ್ತೇವೆ ಎಂಬುದನ್ನೇ ಮರೆತುಬಿಡುತ್ತೇವೆ. ಆಗ ಅವರೂ ನಮ್ಮನ್ನು ಮರೆಯುವ ಅಪಾಯ ಎದುರಾಗಬಹುದು. ಇಂದು ತಾಯಿ–ತಂದೆ ಇಬ್ಬರೂ ಹೊರಗಡೆ ದುಡಿಯುತ್ತಿರುವುದರಿಂದ ಮಕ್ಕಳೊಂದಿಗೆ ಇರಲು ಅವರಿಗೆ ಸಮಯವಿರುವುದಿಲ್ಲ. ಮನೆಯ ಆಳುಗಳೇ ಮಕ್ಕಳನ್ನು ಬೆಳೆಸುತ್ತಾರೆ. ಇದರಿಂದ ಮಕ್ಕಳು ತಂದೆ–ತಾಯಿಯ ನೈಜಪ್ರೀತಿಯಿಂದ ವಂಚಿತರಾಗುತ್ತಾರೆ. ಅವರು ದೊಡ್ಡವರಾದ ಮೇಲೆ ಇದು ತಿರುಗ–ಮುರುಗ ಆಗುತ್ತದೆ. ಅವರು ದೊಡ್ಡವರಾದಾಗ ತಮ್ಮ ವೃದ್ಧ ತಂದೆತಾಯಿಯರ ಸೇವೆಯನ್ನು ಆಳುಗಳಿಂದ ಮಾಡಿಸುತ್ತಾರೆ. ಆಗ ಆ ತಂದೆತಾಯಿಗಳ ಮನಃಸ್ಥಿತಿ ಹೇಗಿರಬೇಡ!

**'ಗೃಹಿಣೀ ಗೃಹಮುಚ್ಯತೇ'** – ಒಂದು ಸಂಸಾರಕ್ಕೆ ಶೋಭೆ ತರುವವಳು ಗೃಹಿಣಿ. ಕನ್ಯೆ ಮದುವೆಯಾಗಿ ಗಂಡನ ಮನೆಗೆ ಬಂದಾಗ, ಆ ಮನೆಯ ಸಂಪ್ರದಾಯ, ಆ ಮನೆಯ ದೇವರುಗಳೇ ಅವಳ ಸಂಪ್ರದಾಯ, ದೇವರುಗಳಾಗಬೇಕಾಗುತ್ತದೆ. ಗಂಡನ ಆಸಕ್ತಿ–ಅನಾಸಕ್ತಿಗಳು, ಹವ್ಯಾಸ–ಅಭಿರುಚಿಗಳನ್ನು ಆಕೆ ತಿಳಿದುಕೊಳ್ಳಬೇಕಾಗುತ್ತದೆ. ಆಕೆಯ ವ್ಯಕ್ತಿತ್ವದಲ್ಲಿ ಮಾಡಿಕೊಳ್ಳಬೇಕಾದ ಈ ಮಾರ್ಪಾಡು ಕಠಿಣವಾದರೂ, ಅನಿವಾರ್ಯ. ಕೆಲವೊಮ್ಮೆ ಈ ಬಗ್ಗೆ ದಂಪತಿಗಳಲ್ಲಿ ಸಂಘರ್ಷಗಳು ಕಂಡುಬರಬಹುದು. ಗಂಡ–ಹೆಂಡಿರ ಜಗಳ ಗಂಧ ತೀಡಿದ ಹಾಗೆ ಇರಬೇಕು. ಇಂಥ ಘರ್ಷಣೆಗಳು ಪರಿಪಕ್ವ ಸಮನ್ವಯದತ್ತ ಕೊಂಡೊಯ್ಯಬೇಕು. ಸಾಂಸಾರಿಕ ಜೀವನ ಸ–ಸಾರವಾಗಿ, ಸ–ರಾಗವಾಗಿ ಸಾಗಬೇಕಾದದ್ದು ಮುಖ್ಯ. ಇಲ್ಲಿ ಹೊಂದಾಣಿಕೆ, ಕೊಡು–ಕೊಳ್ಳುವಿಕೆ ಅವಶ್ಯ. ವೈಯಕ್ತಿಕ ಸೋಲು–ಗೆಲುವುಗಳಿಗಿಂತ ಸಂಸಾರದ ಸುಖ ಸಮಾಧಾನಗಳೇ ಮಹತ್ವದ್ದೆಂದು ಎಲ್ಲರೂ ಮನಗಾಣಬೇಕು.

ಮದುವೆಯಾದ ಹುಡುಗಿ ಎರಡು ಮನೆಗಳನ್ನು ಬೆಳಗಿಸಬಹುದು: ಒಂದು ತಾನು ಹುಟ್ಟಿ ಬೆಳೆದ ತವರುಮನೆ, ಇನ್ನೊಂದು ಕೈಹಿಡಿದ ಗಂಡನ ಮನೆ. ಹುಡುಗಿ ಗಂಡನ ಮನೆಗೆ ಬಂದಾಗ ಅಲ್ಲಿರುವ ಗಂಡ, ಅತ್ತೆ, ಮಾವ, ಮೈದುನ, ನಾದಿನಿ ಎಲ್ಲರಿಗೂ ಹೊಂದಿಕೊಳ್ಳಬೇಕು. ಪಾಶ್ಚಾತ್ಯರ ದೃಷ್ಟಿಯಲ್ಲಿ ಇದೊಂದು ಸ್ತ್ರೀಶೋಷಣೆ. ಆದರೆ ಭಾರತೀಯರ ದೃಷ್ಟಿಯಲ್ಲಿ ಇದು ಪ್ರತಿಯೊಬ್ಬ ಸ್ತ್ರೀಯ ಕರ್ತವ್ಯ, ಧರ್ಮ.

ಎಲೆಮರೆಯ ಕಾಯಿಯಂತೆ ಸಂಸಾರದ ನೊಗವನ್ನು ಸುಗಮವಾಗಿ ಸಾಗಿಸುವುದು, ಈ ದೇಶದ ಸ್ತ್ರೀಯರಿಗೆ ಸಹಜವಾಗಿ ಬಂದ ಗುಣ. ಮನೆಯಲ್ಲಿ ಎಲ್ಲರೂ ಏಳುವ ಮೊದಲೇ ಎದ್ದು ಮನೆಯನ್ನು ಗುಡಿಸಿ, ಸಾರಿಸಿ, ಅಡುಗೆ ಮಾಡುತ್ತಾಳೆ. ರಾತ್ರಿ ಎಲ್ಲರೂ ಮಲಗಿದ ಮೇಲೆ ಮಲಗುತ್ತಾಳೆ. ಮಕ್ಕಳ, ಗಂಡನ ಆರೋಗ್ಯ ಹಾಳಾದರೆ, ಅವರ ಸೇವೆ ಮಾಡುತ್ತಾಳೆ. ಕಷ್ಟ ಪಡುವುದಕ್ಕೆ ಮೊದಲನೆಯವಳಾಗುತ್ತಾಳೆ, ಸುಖಪಡುವುದಕ್ಕೆ ಕೊನೆಯವಳಾಗುತ್ತಾಳೆ.

ನವರತ್ನ ರಾಮರಾಯರ ಜೀವನದಲ್ಲಿ ನಡೆದ ಘಟನೆ ಇದು. ಸ್ವಾತಂತ್ರ್ಯಪೂರ್ವದ ಪ್ರಸಂಗ. ಒಂದು ಹಳ್ಳಿ. ಅಲ್ಲಿ ಒಂದು ಶ್ರೋತ್ರಿಯ ಬ್ರಾಹ್ಮಣ ಕುಟುಂಬ. ಮನೆಯ ಯಜಮಾನ ಸುಸಂಸ್ಕೃತ; ಜನರಿಗೆ ಆತನ ವಿಷಯದಲ್ಲಿ ಭಕ್ತಿ – ಗೌರವ. ಮನೆಯಲ್ಲಿದ್ದವರು ಗಂಡ–ಹೆಂಡತಿ ಇಬ್ಬರೇ, ಈ ವೃದ್ಧ ದಂಪತಿಗಳಲ್ಲಿ ಗಂಡ ತೀರಿಕೊಂಡಾಗ ಹೆಂಡತಿಗೆ ೮೦ಕ್ಕೂ ಮೀರಿದ ವಯಸ್ಸು.

ಹಳ್ಳಿಯ ಒಬ್ಬ ಹಿರಿಯರು ಆಗ ರೆವಿನ್ಯೂ ಅಧಿಕಾರಿಗಳಾಗಿದ್ದ ರಾಮರಾಯರಲ್ಲಿಗೆ ಬಂದು, "ಊರಿಗೆ ಗುರುವಿನ ಹಾಗಿದ್ದ ಆತ ಹೋಗಿಬಿಟ್ಟಿದ್ದಾರೆ. ಅವರ ಪತ್ನಿ ದುಃಖದಲ್ಲಿದ್ದಾರೆ. ತಾವು ತಾಲ್ಲೂಕಿನ ಧಣಿ. ಹಳ್ಳಿಗೆ ಬಂದು ನಾಲ್ಕು ಸಾಂತ್ವನದ ಮಾತುಗಳನ್ನಾಡಿದರೆ ಆಕೆಗೆ ಸಮಾಧಾನವಾಗುತ್ತದೆ" ಎಂದರು. ಕೂಡಲೆ ರಾಮರಾಯರು ಕುದುರೆಯನ್ನೇರಿ ಆ ಹಳ್ಳಿಗೆ ಧಾವಿಸಿ ಹೋದರು. ಸಾವಿನ ಮನೆಯನ್ನು ಮುತ್ತಿಕೊಂಡು ನಿಂತಿದ್ದ ಜನಸಮೂಹದ ಮಧ್ಯೆ ದಾರಿ ಮಾಡಿಕೊಂಡು, ಮನೆಯ ಒಳಗೆ ಬಂದರು.

ತಾಲ್ಲೂಕಿನ ಧಣಿ ಬಂದಿದ್ದಾರೆ ಎಂಬ ಸುದ್ದಿ ತಿಳಿದಾಗ, ಆಕೆ ಸ್ವಲ್ಪ ಕತ್ತೆತ್ತಿ ನೋಡಿದರು. ಕಣ್ಣಿನಲ್ಲಿ ನೀರಿಲ್ಲ; ಮುಖದಲ್ಲಿ ದುಃಖದ ಭಾವವಿಲ್ಲ. ಆಕೆಯನ್ನು ಉದ್ದೇಶಿಸಿ ರಾಮರಾಯರು, "ಹಳ್ಳಿಯ ತಾಯಿಯ ಹಾಗಿರುವ ತಮಗೆ,

ನನ್ನಂಥ ಕಿರಿಯ ಏನು ತಾನೇ ಹೇಳಿಯೇನು? ಹೀಗೆ ಆಗಬಾರದಿತ್ತು. ನಮ್ಮೆಲ್ಲರ ಸಲುವಾಗಿ ಈ ದುಃಖವನ್ನು ನೀವು ಸಹಿಸಿಕೊಳ್ಳಬೇಕು" ಎಂಬ ಆಶಯದ ಒಂದೆರಡು ಮಾತು ಹೇಳಿದರು. ಆಕೆ ಒಂದು ಕ್ಷಣ ತಲೆಯೆತ್ತಿ ನೋಡಿ, "ಅಪ್ಪಾ, ನೀವು ದೊಡ್ಡವರು. ಬಡವರ ಮನೆಗೆ ಬಂದಿರಿ. ಸಮಾಧಾನದ ಮಾತು ಹೇಳಿದಿರಿ. ಇದು ನಿಮ್ಮ ದೊಡ್ಡತನ. ಮುಂಜಾನೆ ಯಜಮಾನರಿಗಿಂತ ಮೊದಲೇ ಏಳುತ್ತಿದ್ದೆ ಎನ್ನುವುದರ ಹೊರತು ಎಲ್ಲದರಲ್ಲಿಯೂ ಅವರು ಮೊದಲು, ಆಮೇಲೆ ನಾನು. ಅವರಿಗೆ ಸ್ನಾನ ಮಾಡಿಸಿದ ನಂತರ ನನ್ನ ಸ್ನಾನ. ಅವರು ಊಟ ಮಾಡಿದ ಮೇಲೆ ನನ್ನ ಊಟ. ಅವರು ನಿದ್ದೆ ಮಾಡಿದ ಮೇಲೆ ನನ್ನ ನಿದ್ದೆ. ಹೀಗಿರುವಾಗ ನನಗಿಂತ ಮುಂದಾಗಿ ಅವರು ಹೋದದ್ದು ಒಳ್ಳೆಯದೇ ಆಗಲಿಲ್ಲವೇ? ಅವರು ಉಳಿದುಕೊಂಡು ನಾನು ಹೋಗಿಬಿಟ್ಟಿದ್ದರೆ ಅವರನ್ನು ಯಾರು ನೋಡಿಕೊಳ್ಳುತ್ತಿದ್ದರು?" ಎಂದು ಹೇಳಿದರು. ಆಗ ಅಲ್ಲಿದ್ದವರ ಬಾಯಿ ಕಟ್ಟಿದಂತಾಗಿ ಕಣ್ಣು ತುಂಬಿಬಂತು.

ಕುಟುಂಬ ಅಂದ ಮೇಲೆ ಭಿನ್ನಾಭಿಪ್ರಾಯಗಳು, ವಾಗ್ವಾದಗಳು ಇದ್ದೇ ಇರುತ್ತವೆ. ಕುಟುಂಬ ನೆಮ್ಮದಿಯಿಂದ ಸುಸೂತ್ರವಾಗಿ ನಡೆಯಲು ಎಲ್ಲರ ಸಹಕಾರವೂ ಬೇಕು. ಆದರೆ ಅದರ ವಿಫಲತೆಗೆ ಒಬ್ಬರೇ ಸಾಕು. ಪ್ರತಿಯೊಬ್ಬ ವ್ಯಕ್ತಿಯಲ್ಲೂ ಒಂದಲ್ಲ ಒಂದು ದೋಷ, ನ್ಯೂನತೆ ಇರುತ್ತದೆ. ದೋಷಸಹಿತನಾದ ಮನುಷ್ಯನನ್ನು ಅವನು ಹೇಗಿದ್ದಾನೋ ಹಾಗೆಯೇ ಸ್ವೀಕರಿಸಿ, ಮನಸಾರೆ ಪ್ರೀತಿಸುವ ಕಲೆಯನ್ನು ನಾವು ಬೆಳೆಸಿಕೊಳ್ಳಬೇಕು. ಕುಟುಂಬದಲ್ಲಿರುವ ಇತರ ವ್ಯಕ್ತಿಗಳ ದೋಷಗಳನ್ನು ನೋಡದೆ, ಗುಣಗಳತ್ತ ನೋಡಿ, ಅದನ್ನು ಬೆಳೆಸುವತ್ತ ಗಮನಹರಿಸಿದರೆ ಸಂಸಾರ ಸುಗಮವಾಗಿ ಸಾಗುತ್ತದೆ.

•

*With best compliments from:*

**TRITON VALVES LIMITED**

TS 16949 Certified Company

*Leading Manufacturers & Exporters of Automobile Tyre Tube Valves, Valve Cores & Accessories*


**REGD. OFFICE:**
SUNRISE CHAMBERS
22, Ulsoor Road
BANGALORE – 560 042
Ph: 080- 25588965/66/68
Fax: (91) 080 – 25586483
E-Mail: info@tritonvalves.com



**FACTORY:**
Mercara Road
Belvadi
MYSORE – 570 018
Ph: 0821-2402411/75/76
Fax: (91) 0821 - 2402729
E-Mail: works@tritonvalves.com

# ಕುಟುಂಬದಲ್ಲಿ ಮಾನವೀಯ ಸಂಬಂಧಗಳು

ವಸುಮತಿ ಉಡುಪ



**ಕೆ**ಲದಿನಗಳ ಮುನ್ನ ಮಾಧ್ಯಮಗಳಲ್ಲಿ ಒಂದು ಅಮಾನವೀಯ ಘಟನೆ ಪ್ರಸಾರವಾಯಿತು. ತೊಂಬತ್ತು ದಾಟಿದ ತಾಯಿಯನ್ನು ಹೆತ್ತ ಮಗ, ಅವನ ಪತ್ನಿ ಮತ್ತು ಇನ್ನೊಬ್ಬ ಸೊಸೆ ಸೇರಿಕೊಂಡು, ಡಾಕ್ಟರರ ಬಳಿ ಕರೆದುಕೊಂಡು ಹೋಗುವ ನೆಪದಲ್ಲಿ ಮನೆಯಿಂದ ಕರೆದೊಯ್ದು, ಗೋಣೀಚೀಲದಲ್ಲಿ ಕಟ್ಟಿ, ನಾಲೆಗೆಸೆದುಬಿಟ್ಟರು. ಮುದುಕಿಯ ಆರ್ತನಾದವನ್ನು ಗಮನಿಸಿದವರ್‍ಯಾರೋ ಆಕೆಯನ್ನು ಪಾರುಮಾಡಿದ್ದರಿಂದ ಸತ್ಯಸಂಗತಿ ಬಯಲಿಗೆ ಬಂತು. ಕ್ರೌರ್ಯದ ಪರಮಾವಧಿ ಎನ್ನಿಸುವ ಇಂಥ ಸಂಗತಿಗಳು ಹೆಚ್ಚಾಗುತ್ತಿರುವ ಕಾಲಘಟ್ಟಕ್ಕೆ ನಾವು ತಲುಪಿದ್ದೇವೆಯೇ? ಪಾಪಪುಣ್ಯಗಳ ಅಂಜಿಕೆಯನ್ನು ಇಂದಿನ ಮನುಷ್ಯ ಮೀರಿಬಿಟ್ಟಿದ್ದಾನೆಯೇ? ಮಾನವೀಯತೆ ಅರ್ಥ ಕಳೆದುಕೊಂಡಿದೆಯೇ? ಸ್ವಾರ್ಥಪ್ರವೃತ್ತಿ ವಿಜೃಂಭಿಸುತ್ತಿದೆಯೇ? ಹಾಗಾಗಿದ್ದರೆ ಅದಕ್ಕೆ ಕಾರಣ ಏನು?

ಒಂದು ಕಾಲವಿತ್ತು, ತೀರಾ ಹಿಂದೇನಲ್ಲ. ಐವತ್ತರುವತ್ತು ವರ್ಷಗಳ ಹಿಂದಿನ ಕಾಲ. ಕುಟುಂಬ ಎಂದರೆ ತಂದೆ, ತಾಯಿ, ಒಂದು ಅಥವಾ ಎರಡು ಮಕ್ಕಳು ಎನ್ನುವ ಸೀಮಿತ ವಲಯ ಆಗಿರದೇ, ಅಜ್ಜ–ಅಜ್ಜಿ, ದೊಡ್ಡಪ್ಪ–ಚಿಕ್ಕಪ್ಪಂದಿರು, ಅವರವರ ಸಂಸಾರ, ಹೀಗೆ ಕುಟುಂಬದ ಸದಸ್ಯರ ಸಂಖ್ಯೆ ಹಿರಿದಾಗಿರುತ್ತಿತ್ತು. ಬೆಳೆಯುತ್ತಿರುವ ಮಗುವಿನ ದೃಷ್ಟಿಯಲ್ಲಿ ಎಲ್ಲರೂ ತನ್ನವರು, ತನ್ನ ಬೇಕುಬೇಡಗಳನ್ನು ಗಮನಿಸುವವರು, ಅಂಗೈಲಿಟ್ಟು, ಮುಂಗೈಲಿ ಮುಚ್ಚಿ ಕಾಪಾಡುವವರು ಎನ್ನಿಸುತ್ತಿತ್ತು. ಯಾರ ಮಗುವನ್ನು ಯಾರೋ ಮೈತೊಳೆಸಿ, ಮತ್ಯಾರೋ ತುತ್ತು ತಿನ್ನಿಸಿ, ಇನ್ಯಾರೋ ಮಗ್ಗುಲಲ್ಲಿ ಮಲಗಿಸಿಕೊಂಡು ತಟ್ಟುತ್ತಿದ್ದ ಕಾಲ ಅದು. ಅಜ್ಜ, ಅಜ್ಜಿಯ ಕತೆಗಳನ್ನು ಮಕ್ಕಳು ಮೈಯೆಲ್ಲಾ ಕಿವಿಯಾಗಿ ಕೇಳುತ್ತಿದ್ದರು. ರಾಮಾಯಣ, ಮಹಾಭಾರತದಂತಹ ಮಹಾಕೃತಿಗಳ ಕತೆ, ಉಪಕತೆಗಳು, ಒಳಿತುಕೆಡುಕುಗಳ ಬಗ್ಗೆ, ಪಾಪಪುಣ್ಯಗಳ ಬಗ್ಗೆ, ತಿಳಿವಳಿಕೆ ಹೆಚ್ಚಿಸುತ್ತಾ, ಎಳೆಯ ಮಕ್ಕಳ ವ್ಯಕ್ತಿತ್ವವನ್ನು ತಿದ್ದಿ, ತೀಡಿ, ಹದಗೊಳಿಸುತ್ತಿದ್ದುವು. ಕಟ್ಟುಕತೆಯಾದರೂ ಸರಿ, ಅದರಲ್ಲೊಂದು ನೀತಿ ಇರಬೇಕು, ಬುದ್ಧಿಮಾತು ಇರಬೇಕು. ಇಂತಹ ವಾತಾವರಣದಲ್ಲಿ ಬೆಳೆದ ಮಕ್ಕಳು, ಕೆಲವು ಅಪವಾದಗಳನ್ನು ಹೊರತುಪಡಿಸಿ, ಸ್ವಾಭಾವಿಕವಾಗಿ ಸಹೃದಯತೆಯನ್ನು ರೂಢಿಸಿಕೊಂಡು, ಆತ್ಮಸಾಕ್ಷಿಗೆ ಅನುಗುಣವಾಗಿ ನಡೆದುಕೊಳ್ಳುವಷ್ಟು ಪ್ರಜ್ಞಾವಂತರಾಗಿರುತ್ತಿದ್ದರು. ತಮ್ಮ ಸುತ್ತಮುತ್ತ ಅವರು ಕಾಣುತ್ತಿದ್ದ ವಾತಾವರಣ ಕೂಡ, ಒಬ್ಬರು ಇನ್ನೊಬ್ಬರೊಡನೆ ಹೊಂದಿಕೊಂಡು ಹೋಗಲು ಪ್ರೇರಣೆ ನೀಡುವಷ್ಟು ಸಮರ್ಥವಾಗಿರುತ್ತಿತ್ತು. ತವರಿನ ಆಶ್ರಯಕ್ಕೆ ಬಂದ ಮನೆ ತಪ್ಪಿದ ಮಗಳಿರಬಹುದು ಅಥವಾ ಅನ್ಯಗತಿ ಇಲ್ಲದ ದೂರದ ಸಂಬಂಧಿಗಳಾದ

ಕೌಟುಂಬಿಕ ಸಾಮರಸ್ಯವು ಸಾಧ್ಯವಾಗಬೇಕಾದರೆ, ಕುಟುಂಬದ ಸದಸ್ಯರು ಪರಸ್ಪರ ಮಾನವೀಯ ಗುಣಗಳಿಂದ ಕೂಡಿದವರಾಗಿರಬೇಕು. ಕ್ರೌರ್ಯ, ದ್ವೇಷ, ಹಿಂಸೆ – ಈ ಬಗೆಯ ಅಮಾನವೀಯ ಭಾವನೆಗಳು ಸಂಸಾರವನ್ನು ನರಕವನ್ನಾಗಿಸುತ್ತವೆ. ಹಣ, ಸುಖ ಇವುಗಳಿಗಿಂತ ಮಾನವೀಯತೆಯೇ ಒಂದು ಕುಟುಂಬವನ್ನು ಒಗ್ಗೂಡಿಸುವ ಬೆಸುಗೆಯಾಗಿ ಮಹತ್ವದ ಪಾತ್ರವನ್ನು ವಹಿಸುವುದನ್ನು ಕಾಣುತ್ತೇವೆ. ಈ ಅಂಶವನ್ನು ಅತ್ಯಂತ ಮನೋಜ್ಞವಾಗಿ, ಹೃದಯಂಗಮವಾಗಿ ಚಿತ್ರಿಸಿರುವ ಲೇಖಕಿ ಸುಪ್ರಸಿದ್ಧ ಮಹಿಳಾ ಸಾಹಿತಿ. ಸೂಕ್ಷ್ಮ ಸಂವೇದನೆಯುಳ್ಳ ಇವರ ಕಥೆ, ಕಾದಂಬರಿ, ಲಲಿತ ಪ್ರಬಂಧಗಳು ಜನಪ್ರಿಯವಾಗಿವೆ.

ಹೆಣ್ಣುಮಕ್ಕಳಿರಬಹುದು, ಅವರಿಗೆ ಮನೆಯಲ್ಲಿ ಒಂದು ತುತ್ತು ಅನ್ನ ಹಾಕಲು ಒಲ್ಲೆ ಅನ್ನುತ್ತಿದ್ದವರು ಬಹಳ ಕಡಿಮೆ. ಹಾಗೆಯೇ ಅಂಥವರು ಕೂಡ ತಮ್ಮದಲ್ಲದ ಮನೆಗೆ ಜೀವ ತೇಯುತ್ತಾ, ಆ ಮನೆಯವರೇ ಆಗಿಬಿಡುತ್ತಿದ್ದರು. ಜಗಳ, ಮನಸ್ತಾಪಗಳು ಏನೇ ಇದ್ದರೂ ಸಂಬಂಧಗಳಲ್ಲಿ ಕ್ರೌರ್ಯ ಇರಲಿಲ್ಲ. ಒಬ್ಬರು ಇನ್ನೊಬ್ಬರನ್ನು ಸಹಿಸಲು ಸಾಧ್ಯವೇ ಇಲ್ಲ ಎನ್ನುವ ವೈರತ್ವ ಇರಲಿಲ್ಲ. ಮನೆಯ ಹಿರಿಯರನ್ನು ಕುರಿತು ನಿಕೃಷ್ಟ ಭಾವನೆ, ಅನಾದರ ಇರಲಿಲ್ಲ.

ಕಾಲದ ಪ್ರಭಾವದಿಂದ ಹಳೆಯ ಮೌಲ್ಯಗಳು ತುಕ್ಕು ಹಿಡಿಯತೊಡಗಿದುವು. ಕುಟುಂಬಗಳು ವಿಘಟನಗೊಂಡವು. ಜೀವನೋಪಾಯವನ್ನು ಅರಸಿಕೊಂಡು ಪರವೂರಿಗೆ ಹೋದವರಂತೂ ಸರಿಯೇ ಸರಿ, ತಮ್ಮ ಚಿಕ್ಕ ಸಂಸಾರದ ಸುತ್ತ ಒಂದು ಗೆರೆ ಎಳೆದುಕೊಂಡುಬಿಟ್ಟರು. ಸ್ವಕೇಂದ್ರೀಕೃತ ಬದುಕು ಅಭ್ಯಾಸವಾಗಿಹೋಯಿತು. ಇಂತಹ ಬದುಕಿನಲ್ಲಿ ತೀರಾ ಹತ್ತಿರದ ಬಳಗದವರು ಕೂಡ ಅನ್ಯರೆನ್ನಿಸಲು ಶುರುವಾದದ್ದು ಒಂದು ದುರಂತ. ಮನೆಗೆ ಒಂದೋ, ಎರಡೋ ಮಕ್ಕಳು. ಅವರ ಆಸೆ, ಆಕಾಂಕ್ಷೆಗಳನ್ನು ಪೂರೈಸಲು ತುದಿಗಾಲಿನಲ್ಲಿ ನಿಂತಿರುವ ಪೋಷಕರು. ಎಷ್ಟೋ ಮನೆಗಳಲ್ಲಿ ಇಬ್ಬಿಬ್ಬರ ದುಡಿಮೆಗೆ ತೆರೆದುಕೊಂಡ ಜೀವನಕ್ರಮ. ಕಾರ್ಟೂನ್ ಚಾನಲ್‌ಗಳಲ್ಲಿ, ಕಂಪ್ಯೂಟರ್ ಗೇಮ್ಸ್‌ಗಳಲ್ಲಿ ಕಳೆದುಹೋಗುವ ಮಕ್ಕಳು. "ಹೇಗಾದರೂ ಸರಿ, ಮೊದಲಿಗನಾಗು, ಮುನ್ನುಗ್ಗು" ಎನ್ನುವ ಹಿತೋಪದೇಶ ಬೇರೆ. ಹಣ ಹಾಗೂ ಅದು ತಂದುಕೊಡುವ ಐಷಾರಾಮಿ ಬದುಕು – ಇವು ಮಾತ್ರವೇ ಜೀವನದ ಪರಮಸತ್ಯ ಎನ್ನಿಸತೊಡಗಿರುವ ಕೊಳ್ಳುಬಾಕ ಸಂಸ್ಕೃತಿ. ಹೆತ್ತವರನ್ನು ಇಳಿವಯಸ್ಸಿನಲ್ಲಿ ಪೋಷಿಸಬೇಕಾದ ಕುರಿತು ಕಾನೂನು ಮಾಡಬೇಕಾದ ವಿಪರ್ಯಾಸ. ಹೆಚ್ಚುತ್ತಿರುವ ವೃದ್ಧಾಶ್ರಮಗಳು, ವರದಕ್ಷಿಣೆಯ ಹಪಾಪಿತನದಿಂದ ನಡೆಯುತ್ತಿರುವ ಕೊಲೆಗಳು, ಬದುಕು ಎಲ್ಲೋ ದಿಕ್ಕು ತಪ್ಪಿಬಿಟ್ಟಿದೆ ಎನಿಸುವ ಕಾಲಮಾನ. ಹಣವಿದ್ದವರಿರಲಿ, ಇಲ್ಲದವರಿರಲಿ, ಎಲ್ಲರ ಮನಸ್ಸಿನಲ್ಲೂ ಏನೋ ಒಂದು ಬಗೆಯ ಉದ್ವೇಗ, ತಲ್ಲಣ, ಅನಾಥಭಾವ. ಇಂತಹ ಸಂದರ್ಭದಲ್ಲೂ ಅಲ್ಲೊಂದಿಲ್ಲೊಂದು ಚೇತೋಹಾರಿ ಘಟನೆಗಳು ಕಾಣಸಿಗುತ್ತವೆ, ಮಾದರಿ ಅನಿಸುತ್ತವೆ. ಉದಾಹರಣೆಗೆ, ಹರಿದುಹಂಚಿಹೋಗಿರುವ ಕುಟುಂಬವೊಂದರ ನೂರಾರು ಸದಸ್ಯರು ವರ್ಷಕ್ಕೊಮ್ಮೆ ಒಗ್ಗೂಡುತ್ತಾರೆ, ಸಂಬಂಧವನ್ನು ನವೀಕರಣಗೊಳಿಸಿಕೊಳ್ಳುತ್ತಾರೆ. ಎಲ್ಲಕ್ಕಿಂತ ಮಿಗಿಲಾದ ಸಂಗತಿ ಎಂದರೆ ಕಷ್ಟದಲ್ಲಿರುವ ತಮ್ಮ ಕುಟುಂಬದ ಸದಸ್ಯರ ಓದಿಗೋ, ವಿವಾಹಕ್ಕೋ ಸಹಾಯ ಮಾಡಲು, ಉಳ್ಳವರು ಹಣ ಹಾಕಿ, ಒಂದು ನಿಧಿಯನ್ನು ಸ್ಥಾಪಿಸಿದ್ದಾರೆ ಎನ್ನುವುದು. ಇದು ಪತ್ರಿಕೆಯಲ್ಲಿ ಪ್ರಕಟವಾದ ನೈಜ ವರದಿ. ತಮ್ಮ ಮಕ್ಕಳ ಹುಟ್ಟುಹಬ್ಬದ ದಿನವೋ, ವೈವಾಹಿಕ ವಾರ್ಷಿಕೋತ್ಸವದ ಸಂದರ್ಭದಲ್ಲೋ, ಅಂಗವಿಕಲರ, ಅನಾಥರ ಸೇವಾಕೇಂದ್ರಕ್ಕೆ ದೇಣಿಗೆ ಕೊಟ್ಟು ಧನ್ಯತಾಭಾವ ಅನುಭವಿಸುವವರು ಬಹಳಷ್ಟು ಜನ. ಅನ್ಯರ ಕಷ್ಟಕ್ಕೆ ಮರುಗುವ ಇಂಥವರೆಲ್ಲರೂ ತಮ್ಮ ಸನಿಹದ ಬಂಧುಬಳಗದವರ ಕಷ್ಟಕಾರ್ಪಣ್ಯಕ್ಕೆ ಇದೇ ಮೃದುಭಾವನೆಯಿಂದ ಸ್ಪಂದಿಸುತ್ತಾರೆ ಎಂದು ಹೇಳಬರುವುದಿಲ್ಲ. ನಾಲ್ಕುಜನ ಮಕ್ಕಳಿರುವ ಕುಟುಂಬದಲ್ಲಿ ವೃದ್ಧರನ್ನು 'ಅವರ ಮನೆಯಲ್ಲಿರಲಿ' ಎಂದು ಇವರೂ, 'ಇವರ ಮನೆಯಲ್ಲಿರಲಿ' ಎಂದು ಅವರೂ ಕಾಲ್ಚೆಂಡಿನ ಆಟ ಆಡಿಸುವ ಉದಾಹರಣೆಗಳು ಬೇಕಾದಷ್ಟಿವೆ. ಆರ್ಥಿಕ ಅವಲಂಬನೆ ಇದ್ದರಂತೂ ಅಂತಹ ವೃದ್ಧರ ಪಾಡು ನಾಯಿಪಾಡು. ಗಂಡನ ಮನೆಯಲ್ಲಿ ನರಕ ಅನುಭವಿಸುತ್ತಿರುವ ಒಡಹುಟ್ಟಿದ ಅಕ್ಕತಂಗಿಯರ ಕುರಿತೂ ಉದಾಸೀನತೆ, ನಿರ್ಲಿಪ್ತತೆಯನ್ನು ಬೆಳೆಸಿಕೊಂಡವರಿರುತ್ತಾರೆ. 'ಎಲ್ಲಾ ಹಣೆಬರಹ, ಹೊಂದಿಕೊಂಡು ಹೋಗು' ಎನ್ನುವ ಉಪದೇಶ ಬೇರೆ. ಹೆತ್ತವರು ಅಸಹಾಯಕರಾಗಿದ್ದಲ್ಲಿ, 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ' ಎನ್ನುವ ಹೇಳಿಕೆ ಅಕ್ಷರಶಃ ಸತ್ಯವಾಗಿಬಿಡುತ್ತದೆ.

ಒಂದು ಕುಟುಂಬ ಅಂದರೆ ಅಲ್ಲಿ ಬದ್ಧತೆ ಇರಬೇಕು. ಪ್ರತಿಯೊಬ್ಬ ಸದಸ್ಯರಿಗೂ ತಮ್ಮ ತಮ್ಮ ಜವಾಬ್ದಾರಿಗಳ ಅರಿವಿರಬೇಕು. ಮನೆಯ ಯಜಮಾನ ಹೊಣೆಗೇಡಿಯಾದಲ್ಲಿ ಅಂತಹ ಕುಟುಂಬಗಳ ಸ್ಥಿತಿ ಅಧೋಗತಿ. ತಾಯಿಯಾದವಳು ದುಡಿದು, ಕುಟುಂಬವನ್ನು ಸಾಕಬೇಕಾದ ಪರಿಸ್ಥಿತಿ. ಸಂಕಷ್ಟಗಳು ಎದೆಗುಂದಿಸಿದಾಗ ಮನೆ ತೊರೆದು ಪಲಾಯನ ಮಾಡುವ ಪ್ರವೃತ್ತಿ ಕೆಲವು ಗಂಡಸರಿಗಿರುತ್ತದೆ. ಹೆಣ್ಣುಮಕ್ಕಳು ಹೀಗೆ ಸಂಸಾರ ತೊರೆದು ಓಡಿಹೋಗುವ ಪ್ರಸಂಗಗಳು ಅಪರೂಪ. ಏನೆಲ್ಲಾ ಕಷ್ಟ ಅನುಭವಿಸಿ, ತನ್ನ ಮಕ್ಕಳನ್ನು ದಡ ಮುಟ್ಟಿಸುವ ಛಾತಿ ಹೆಣ್ಣಿನ ಸಹನಾಶಕ್ತಿಯ ಪ್ರತೀಕ. ವರ್ಷಗಳ ನಂತರ, ಎಲ್ಲಾ ಸುಸೂತ್ರವಾದ ಮೇಲೆ, ಯಜಮಾನ ಎನ್ನಿಸಿಕೊಂಡವನು ಮನೆಗೆ ಹಿಂದಿರುಗಿದರೆ ಅಂಥವನ ಬಗ್ಗೆ ಗೌರವಾದರಗಳು ಉಳಿದೀತಾದರೂ ಹೇಗೆ? ಕಷ್ಟನಷ್ಟಗಳಿಗೆ ಎದೆಗೆಡದ, ಜವಾಬ್ದಾರಿಯ ಅರಿವಿರುವ, ಕುಟುಂಬವತ್ಸಲನಾದ ಯಜಮಾನ ಸಂಸಾರದ ಪ್ರಮುಖ ಆಧಾರ.

ತಮ್ಮ ದುಶ್ಚಟಗಳಿಂದ, ದುರಭ್ಯಾಸಗಳಿಂದ, ದುಡಿದಿದ್ದರ ಬಹುಪಾಲು ಕಳೆದು, ಮನೆಮಂದಿಯನ್ನು ಕಣ್ಣೀರಿನಲ್ಲಿ ಕೈತೊಳೆಸುವ ಬೇಜವಾಬ್ದಾರಿ ಪ್ರವೃತ್ತಿಯವರಿಂದ ಮನೆ ನರಕವಾಗುತ್ತದೆ. ಯೋಗ್ಯ ಮಾರ್ಗದರ್ಶನವಿಲ್ಲದೆ ಮಕ್ಕಳು ದಿಕ್ಕೇಡಿಗಳಾಗುವುದಲ್ಲದೆ ತಂದೆಯಂತೆ ದುಶ್ಚಟಗಳ ದಾಸರಾದರೂ ಆಶ್ಚರ್ಯವಿಲ್ಲ.

ಸಂಸಾರ ಸಸಾರವಲ್ಲ, ಅದೊಂದು ಗುರುತರ ಜವಾಬ್ದಾರಿ. ಹೆಜ್ಜೆಹೆಜ್ಜೆಗೂ ಎಚ್ಚರಿಕೆಯಿಂದ ಇರಬೇಕಾದ ಮುಳ್ಳಿನ ದಾರಿ. ವಿಭಿನ್ನ ಪರಿಸರದಲ್ಲಿ ಬೆಳೆದ ಎರಡು ಜೀವಗಳು ದಾಂಪತ್ಯಜೀವನದಲ್ಲಿ ಸಮರಸರಾಗಿರಲು ಹೊಂದಾಣಿಕೆಯೆಂಬುದು ಬಹುಮುಖ್ಯ. ತಮ್ಮ 'ಅಹಂ' ಅನ್ನು ನಿಯಂತ್ರಣದಲ್ಲಿ ಇಟ್ಟುಕೊಂಡು ಸಂಗಾತಿಯ ಅಭಿಪ್ರಾಯವನ್ನು ಗೌರವಿಸುವ ಮನೋಧರ್ಮ ಇಲ್ಲಿ ಬಹುಮುಖ್ಯ. 'ಅಹಂ' ಮೇಲುಗೈ ಪಡೆದರೆ ಮನೆ ರಣರಂಗವಾಗುವುದಲ್ಲದೇ ವಿಚ್ಛೇದನದ ಹಂತದವರೆಗೆ ತಲುಪುವ ಸಾಧ್ಯತೆಯಿದೆ. ಇಂಥವರ ಮಕ್ಕಳ ಕೋಮಲವಾದ ಮನಸ್ಸು ಹೇಗೆ ನಲುಗಿಹೋಗಬಹುದೆಂದೂ, ಜೀವನದ ಬಗೆಗೆ ಅವರು ಎಂತಹ ನಿರಾಶಾದಾಯಕ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬಹುದೆಂದೂ, ವಿವರಿಸಬೇಕಾಗಿಲ್ಲ. ಗಂಡುಹೆಣ್ಣುಗಳಿಬ್ಬರಿಗೂ ಆರ್ಥಿಕವಾದ ಸ್ವಾತಂತ್ರ್ಯ ಇರುವೆಡೆಗಳಲ್ಲಿ, ಸಣ್ಣಪುಟ್ಟ ಸಂಗತಿಗಳೂ ವಿಪರೀತವಾಗುವ ಸಂಭವ ಹೆಚ್ಚಾಗಿರುತ್ತದೆ. ಈ ಸಂದರ್ಭಗಳಲ್ಲಿ ಕೊನೆಯಪಕ್ಷ ಇಬ್ಬರಲ್ಲಿ ಒಬ್ಬರಾದರೂ ತಾಳ್ಮೆ, ಸಂಯಮ ರೂಢಿಸಿಕೊಳ್ಳಬೇಕಾದದ್ದು ಭವಿಷ್ಯದ ಹಿತದೃಷ್ಟಿಯಿಂದ ಅತ್ಯವಶ್ಯಕ.

'ಹೆಣ್ಣು ಮಕ್ಕಳಿಗೆ ಹೆಚ್ಚಿನ ಓದು ಅನಗತ್ಯ' ಎನ್ನುವ ಭಾವನೆ ಒಂದು ಕಾಲದಲ್ಲಿ ವ್ಯಾಪಕವಾಗಿತ್ತು. ಕ್ರಮೇಣ ಗಂಡುಮಕ್ಕಳಂತೆ ಹೆಣ್ಣುಮಕ್ಕಳನ್ನೂ ಉನ್ನತ ವಿದ್ಯಾಭ್ಯಾಸಕ್ಕೆ ಕಳುಹಿಸುವ ಕಾಲ ಬಂತು. ಹೆಣ್ಣುಮಕ್ಕಳು ತಮ್ಮ ಕಾಲಮೇಲೆ ತಾವು ನಿಲ್ಲುವಂತಾದರು. ರೂಢಿಗತ ಮೌಲ್ಯಗಳಲ್ಲಿ ಬದಲಾವಣೆಯಾಗಿದೆಯೆಂದು ಮೇಲ್ನೋಟಕ್ಕೆ ಕಂಡುಬಂದರೂ ವಾಸ್ತವದಲ್ಲಿ ಇದು ಎಷ್ಟರಮಟ್ಟಿಗೆ ಸತ್ಯ? ಕೆಲ ವಿದ್ಯಾವಂತ, ಅನುಕೂಲವಂತ ಕುಟುಂಬಗಳು ಬದಲಾವಣೆಗೆ ಸ್ಪಂದಿಸಿದರೂ ಸಮಾಜದ ದೊಡ್ಡ ಭಾಗ ಇನ್ನೂ ಹಳೆಯ ನಂಬಿಕೆಗಳನ್ನೇ ಇಟ್ಟುಕೊಂಡು ಒದ್ದಾಡುತ್ತಿದೆ. ಅವುಗಳ ಮಟ್ಟಿಗೆ ಹೆಣ್ಣು ಇವತ್ತಿಗೂ ತಲೆಯ ಮೇಲಿನ ಹೊರೆ, ಜವಾಬ್ದಾರಿ. ಹೆಣ್ಣುಭ್ರೂಣದ ಹತ್ಯೆ ಕಾನೂನಿನ ಕಣ್ತಪ್ಪಿಸಿ ನಡೆಯುತ್ತಲೇ ಇದೆ. ಗಂಡುಸಂತಾನದ ಮೋಹ ರಾರಾಜಿಸುತ್ತಿದೆ. ಹೆಣ್ಣುಗಂಡುಗಳ ಅನುಪಾತದಲ್ಲಿ ವ್ಯತ್ಯಾಸವಾಗುತ್ತಾ, ವಿವಾಹವಯಸ್ಕ ಗಂಡುಗಳಿಗೆ ಸೂಕ್ತ ಹೆಣ್ಣು ದೊರಕದಂತಹ ಸಂದರ್ಭ ಸೃಷ್ಟಿಯಾಗಿದೆ. ಈಗಲಾದರೂ ಎಚ್ಚೆತ್ತುಕೊಳ್ಳದಿದ್ದಲ್ಲಿ ಪರಿಣಾಮ ವಿಪರೀತವಾಗಬಹುದು. ಇಂತಹ ಸಂದರ್ಭದಲ್ಲಿ ಕುಟುಂಬದ ಹಂತದಿಂದಲೇ ಮಾರ್ಗದರ್ಶನದ ಅನಿವಾರ್ಯತೆಯಿದ್ದು, ಮಾಧ್ಯಮಗಳು ಈ ನಿಟ್ಟಿನಲ್ಲಿ ಶ್ರಮಿಸುತ್ತಿರುವುದು ಸ್ವಾಗತಾರ್ಹ. ವಂಶೋದ್ಧಾರಕನನ್ನು ಹೆತ್ತುಕೊಡದವಳನ್ನು ನಿಕೃಷ್ಟಭಾವನೆಯಿಂದ ನೋಡುವ ಮನೋಧರ್ಮವು ಬದಲಾಗಬೇಕು. ಆಗ ಮಾತ್ರ ಹೆಣ್ಣು ಹೆತ್ತವಳನ್ನು ದೂಷಿಸುವ ಪ್ರಸಂಗಗಳು ಕಡಿಮೆಯಾಗಬಹುದು. ಆದರೂ ಮನೆಯ ಹಿರಿಯರಿಗೆ, ಕೈಹಿಡಿದವನಿಗೆ, ಮನೆಯ ಸೊಸೆಯಾಗಿ ಬಂದವಳ ಕುರಿತು ಆದರ, ಅಭಿಮಾನ ಇರಬೇಕಾದ್ದು ಅತ್ಯವಶ್ಯಕ. ಅವಳ ಹೊಟ್ಟೆಯಲ್ಲಿ ಚಿಗುರುವ ಮೊಳಕೆಗಳು ತಮ್ಮದೇ ವಂಶದ ಕುಡಿಗಳು, ದೇವರ ವರಪ್ರಸಾದ ಎನ್ನುವ ಸ್ವೀಕಾರಾರ್ಹ ಭಾವನೆ ಇದ್ದಲ್ಲಿ ಹೆಣ್ಣು, ಗಂಡು ಎನ್ನುವ ವ್ಯತ್ಯಾಸ ದೊಡ್ಡದೆನಿಸುವುದಿಲ್ಲ. 'ಅಪುತ್ರಸ್ಯ ಗತಿರ್ನಾಸ್ತಿ' – ಪುತ್ರನಿಲ್ಲದವನಿಗೆ ಗತಿಯಿಲ್ಲ ಎನ್ನುವ ಕೊರಗು ಕಾಡುವುದಿಲ್ಲ. ಒಂದು ಕಾಲಕ್ಕೆ ಪ್ರಸ್ತುತವೆನಿಸಿರಬಹುದಾದ ಹೇಳಿಕೆಗಳು ಸದಾಕಾಲಕ್ಕೂ ಸತ್ಯವಾಗಿರಬೇಕಾಗಿಲ್ಲ, ಹಾಗಿರಲು ಸಾಧ್ಯವೂ ಇಲ್ಲ.

ಈ ಸಂದರ್ಭದಲ್ಲಿ ಮತ್ತೊಂದು ಸತ್ಯಘಟನೆ ನೆನಪಾಗುತ್ತಿದೆ. ತನ್ನ ಮಕ್ಕಳಿಂದ ತನ್ನ ಭವಿಷ್ಯಜೀವನದಲ್ಲಿ ಪ್ರಾಣಕ್ಕೆ ಗಂಡಾಂತರವಿದೆ ಎಂದು ಶಾಸ್ತ್ರದವನೊಬ್ಬನಿಂದ ತಿಳಿದ ತಂದೆಯು, ತನ್ನ ಮೂರು ಮಕ್ಕಳನ್ನು ನಿರ್ದಯವಾಗಿ ಕೊಲೆಗೈದ ಘಟನೆ ಇದು. ಈ ಹಿಂದೆಯೇ ಒಂದು ಎಳೆಗೂಸನ್ನು ಮನೆಯ ಸಿಂಕಿನಲ್ಲಿ ಉಸಿರುಗಟ್ಟಿಸಿ ಕೊಂದ ಅವನ ಹೀನಕೃತ್ಯವನ್ನು ಮನೆಯವರು ಮುಚ್ಚಿಟ್ಟಿದ್ದರಂತೆ. ಈ ಕ್ಷಮೆಯಿಂದ ಅವನ ಆಸುರೀಶಕ್ತಿ ವಿಜೃಂಭಿಸಿತೇ ವಿನಾ ತಣಿಯಲಿಲ್ಲ, ಪಶ್ಚಾತ್ತಾಪ ಕಾಡಲಿಲ್ಲ. ಉಳಿದ ಮಕ್ಕಳನ್ನು ಮನೆಯಿಂದಾಚೆ ಕರೆದೊಯ್ದು ಹತ್ಯೆ ಮಾಡಿದವನನ್ನು ಯಾವ ಹೆತ್ತ ಕರುಳು ಕ್ಷಮಿಸೀತು? ಪ್ರಕರಣ ಬಯಲಿಗೆ ಬಂತು. ಅಪ್ಪನ ಮೌಢ್ಯಕ್ಕೆ ಬಲಿಯಾದವರೆಲ್ಲಾ ಚಿಕ್ಕಪುಟ್ಟ ಹಸುಳೆಗಳು. ಯಾರ ರಕ್ಷಣೆಯಲ್ಲಿ, ಅವಲಂಬನೆಯಲ್ಲಿ ಅಮಾಯಕ ಜೀವಗಳು ಸುರಕ್ಷಿತವಾಗಿ ಬೆಳೆಯಬೇಕಿತ್ತೋ, ಅವನೇ ಯಮನಾದರೆ?